ಶ್ರೀ ಪಿ.ಜಿ. ಆರ್. ಸಿಂಧ್ಯ : ಹೌದು ಅಥವಾ ಇಲ್ಲ ಎಂದು ಹೇಳಬೇಕು. ಏನು ಪರಿಶೀಲನೆ ಮಾಡಬೇಕು? ಯಾವ ಉದ್ದೇಶದಿಂದ? ಏನಾದರೂ ಉದ್ದೇಶಗಳಿವೆಯೆ? ಏಕೆಂದರೆ ಇದಕ್ಕೆ ಬೇರೆ ಬೇರೆ ಅರ್ಥಗಳು ಬರುತ್ತವೆ.

ಶ್ರೀ ಎಂ. ಎಸ್ ಪಾಟೀಲ್ ; ತಮ್ಮ ಅಭಿಪ್ರಾಯ ಏನು?

ಶ್ರೀ ಆರ್. ವಿ. ದೇಶಪಾಂಡೆ ; ನಮ್ಮ ಅಭಿಪ್ರಾಯ ಹೇಳುತ್ತೇವೆ ನಿಮ್ಮ ಅಭಿಪ್ರಾಯ ಬಂದ ಮೇಲೆ ನಮ್ಮ ಅಭಿಪ್ರಾಯ ಹೇಳುತ್ತೇವೆ.

ಅಧ್ಯಕ್ಷರು ; ಶ್ರೀ ವಿಜಯಕುಮಾರ್ ಶೆಟ್ಟಿ...

ಪೋಲೀಸ್ ಸಂಪರ್ಕ ವ್ಯವಸ್ಥೆಯನ್ನು ಆಧುನೀಕರಣ ಗೊಳಿಸುವುದು

2213 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪೋಲೀಸ್ ಸಂಪರ್ಕ ವ್ಯವಸ್ಥೆಯನ್ನು ಆಧುನೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ರಾಜ್ಯದಲ್ಲಿ ಪೋಲೀಸ್ ಸಂಪರ್ಕ ವ್ಯವಸ್ಥೆ ಬಹಳ ಹಳೆಯದಾಗಿದ್ದು, ಆಧುನೀಕ ಕಾಲಕ್ಕೆ ಸರಿಯಾಗಬಲ್ಲ ವ್ಯವಸ್ಥೆಯನ್ನು ಸರ್ಕಾರ ಮನ ಗಂಡಿದೆಯೇ?

ಇ) ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಬೆಂಗಳೂರು ಕೇಂದ್ರವನ್ನು ಎಲ್ಲಾ ಜಿಲ್ಲೆಗಳು ಸಂಪರ್ಕಿಸಲು ಅನುಕೂಲವಾಗುವಂತೆ ರೇಡಿಯೋ ಟೆಲಿಗ್ರಾಫಿ (ಹೈ ಫ್ರಿಕ್ವೆನ್ಸಿ) ಸಂಪರ್ಕ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆ ನಿಸ್ತಂತು ವಿಭಾಗ ಒದಗಿಸಿದೆ.

2) ಲ್ಯಾಂಡ್ ಲೈನ್ ಟೆಲಿಪ್ರಿಂಟರ್ ಸಂದೇಶ ಮಾಧ್ಯಮವನ್ನು ಅಳವಡಿಸಲಾಗಿದೆ.

3) ಒಂದೇ ಸಮಯಕ್ಕೆ ಎಲ್ಲಾ ಜಿಲ್ಲೆಗಳಿಗೆ ಸಂದೇಶ ನೀಡಲು ಆಟೋಮ್ಯಾಕ್ಸ್ ಸಂಪರ್ಕ ಮಾಧ್ಯಮವನ್ನು ಬೆಂಗಳೂರಿನಲ್ಲಿ ಅಳವಡಿಸಲಾಗಿ.

4) ಬೆಳಗಾಂ ಮತ್ತು ಬೆಂಗಳೂರುಗಳಲ್ಲಿ ಫ್ಯಾಸಿಮಿಲಿ ಮಾಧ್ಯಮವನ್ನು ಕಲ್ಪಿಸಲಾಗಿದೆ.

5) ಕರ್ನಾಟಕ ರಾಜ್ಯ ಮೀಸಲು ಪಡೆ ಮತ್ತು ಜಿಲ್ಲಾಮೀಸಲು ದಳ (ಸ್ಟ್ರೈಕಿಂಗ್ ಫೋರ್ಸ್)ಗೆ ವೈರಲೆಸ್ ವ್ಯವಸ್ಥೆ ಕಲ್ಪಿಸಿರುತ್ತೆ.

6) ರಾಜ್ಯದ ಎಲ್ಲಾ ಪೋಲೀಸ್ ಠಾಣೆಗಳಿಗೆ ನಿಸ್ತಂತು ಸಂಪರ್ಕ ವ್ಯವಸ್ಥೆ ವಿಸ್ತರಿಸಲಾಗಿದೆ.

7) ಎಲ್ಲಾ ಜಿಲ್ಲಾ ಕೇಂದ್ರ ಹಾಗೂ ಮುಖ್ಯ ಪಟ್ಟಣಗಳಲ್ಲಿ ಪೋಲೀಸ್ ಕಂಟ್ರೋಲ್ ರೂಮುಗಳನ್ನು ಸ್ಥಾಪಿಸಲಾಗಿದೆ.

8) ಎಲ್ಲಾ ಪೋಲೀಸ್ ಇನ್ಸ್‌ಪೆಕ್ಟರ್‌ಗಳ ವಾಹನಗಳಿಗೆ ವೈರ್‌ಲೆಸ್ ಸೆಟ್ಟುಗಳನ್ನು ಅಳವಡಿಸಲಾಗಿದೆ.

9) ಎಲ್ಲಾ ಟ್ರಾಫಿಕ್ ಪೋಲೀಸ್ ಅಧಿಕಾರಿಗಳ ಟ್ರಾಫಿಕ್ ಕೆಲಸಕ್ಕಾಗಿ ವೈರ್‌ಲೆಸ್ ಸೆಟ್ಟುಗಳನ್ನು ನೀಡಲಾಗಿದೆ.

10) ಬೆಂಗಳೂರು ಸಿಟಿಯ ಎಲ್ಲಾ ಪೋಲೀಸ್ ಅಧಿಕಾರಿಗಳ ಅನುಕೂಲಕ್ಕಾಗಿ ಹೊಸ ಸಿ.ಡಾಟ್ ದೂರ ಸಂಪರ್ಕ ವಿನಿಮಯ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

ಆ) *1) ಹಳೆಯ ವೈರ್‌ಲೆಸ್ ಸೆಟ್‌ಗಳ ಬದಲಿಗೆ ಮೆಸರ್ಸ್ ವಿ.ಹೆಚ್.ಪಿ. ಮತ್ತು ಮೆಸರ್ಸ್ ಬಿ.ಇ.ಎಲ್. ಬೆಂಗಳೂರು ಅವರು ತಯಾರಿಸಿರುವ ಹೊಸ ಮಾದರಿಯ ವೈರ್‌ಲೆಸ್ ಸೆಟ್‌ಗಳನ್ನು ಒದಗಿಸಲಾಗಿದೆ.*

2) ಎಲೆಕ್ಟ್ರಾನಿಕ್ ಟೆಲಿಪ್ರಿಂಟರ್‌ಗಳನ್ನು ಒದಗಿಸಿದೆ. ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಆಗುತ್ತಿರುವ ಇತ್ತೀಚಿನ ಬೆಳವಣಿಗೆಯನ್ನು ಪೋಲೀಸ್ ಇಲಾಖೆ ಗಮನಿಸುತ್ತಿದೆ. ಅವುಗಳಲ್ಲಿ ಸೂಕ್ತವಾದುದನ್ನು ಪೋಲೀಸ್ ಇಲಾಖೆಯ ಕೆಲಸಗಳಿಗೆ ಅಳವಡಿಸಲಾಗುವುದು.

ಇ) ಪೋಲೀಸ್ ವೈರಲೆಸ್ ಆಧುನೀಕರಣಕ್ಕಾಗಿ 1991-92ನೇ ಸಾಲಿನಲ್ಲಿ 69-00 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಅಂದಾಜಿರುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, 1980 ರಿಂದ ನಮ್ಮ ರಾಷ್ಟ್ರದಾದ್ಯಂತ ಸಂಪರ್ಕ ವ್ಯವಸ್ಥೆ ಬಹಳಷ್ಟು ತ್ವರಿತಗತಿಯಲ್ಲಿ ಅಭಿವೃದ್ಧಿಯಾಗುತ್ತಿದ್ದರೂ ಅದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಆಗುತ್ತಿಲ್ಲ. ನಮ್ಮಲ್ಲಿ ಸಾಧಾರಣ ಓಬೀರಾಯನ ಕಾಲದ ವ್ಯವಸ್ಥೆಗಳೇ ಇವೆ ಎಂದರೆ ತಪ್ಪಾಗುವುದಿಲ್ಲ. ಎಲ್ಲ ಪತ್ರಿಕೆಗಳಲ್ಲಿ ಬಂದಂತೆ ಇತ್ತೀಚೆಗೆ ನಮ್ಮ ರಾಷ್ಟ್ರ ನಾಯಕರಾದ ರಾಜೀವ್ ಗಾಂಧಿಯವರ ಹತ್ಯಾರೋಪಿಗಳು ಕೋಣನಕುಂಟೆಯಲ್ಲಿದ್ದಾರೆಂದು ಗೊತ್ತಾದರು 24 ಗಂಟೆ ತಡವಾಗಿ ಅವರನ್ನು ಅಟಾಕ್ ಮಾಡಿದಂಥ ಸಂದರ್ಭ ಬಂದಿತು. ಏಕೆಂದರೆ ಸಿ.ಬಿ.ಐ ನವರು ಡೆಲ್ಲಿಯಲ್ಲಿದ್ದಾರೆ. ಎಸ್.ಐ.ಟಿ.ಯವರು ಮದ್ರಾಸ್‌ನಲ್ಲಿದ್ದಾರೆ. ಕರ್ನಾಟಕದ ಪೋಲೀಸ್ ವ್ಯವಸ್ಥೆಯಲ್ಲಿ ಅವರನ್ನು ಸಂಪರ್ಕಮಾಡುವುದಕ್ಕೆ ಅಸಾಧ್ಯವಾಗಿದೆ. ಇಂಥ ವ್ಯವಸ್ಥೆ ನಿಜವಾಗಿಯೂ ಸರಿಯಲ್ಲ. ನಮ್ಮ ರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿ ಹೊಂದುತ್ತಿದ್ದರೂ ನಮ್ಮ ಕರ್ನಾಟಕದಲ್ಲಿ ಆಗುತ್ತಿಲ್ಲ ಎಂಬುದು ಗೊತ್ತಾಗುತ್ತದೆ. ಅದಕ್ಕೋಸ್ಕರ ಈ ಸಂಪರ್ಕ ವ್ಯವಸ್ಥೆಯನ್ನು ಆದಷ್ಟು ಬೇಗ ಅಭಿವೃದ್ಧಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿನ ಹೆಚ್ಚಾಗಿ ಸಂಪರ್ಕ ವ್ಯವಸ್ಥೆ ಮಂತ್ರಿವರ್ಯರ ಟೂರ್ ಪ್ರೋಗ್ರಾಮ್ ಕನ್ಫೇ ಮಾಡುವುದರಲ್ಲೇ ಹೆಚ್ಚು ಇಂಟರೆಸ್ಟ್ ತೋರಿಸುತ್ತಿದೆ. ಇಲಾಖೆಯ ವಿಚಾರದಲ್ಲಿ ಹೆಚ್ಚು ಇಂಟರೆಸ್ಟ್ ತೋರಿಸುತ್ತಿಲ್ಲ. ದಯಮಾಡಿ ಈ ವಿಚಾರದಲ್ಲಿ ಹೆಚ್ಚಿನ ಗಮನವಹಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಮಂತ್ರಿಗಳು ಸುಧೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ ಶೆಟ್ಟರೇ, ಅವರು ಅದರಲ್ಲಿ 10 ಪಾಯಿಂಟ್ಸ್ ಹೇಳಿದ್ದಾರೆ. ಆದುದರಿಂದ You must be satisfied with that.

ಶ್ರೀ ವಿಜಯಕುಮಾರ ಶೆಟ್ಟಿ : ರಾಜೀವ್ ಗಾಂಧಿಯವರ ಹತ್ತೆಗೆ ಸಂಬಂಧಪಟ್ಟವರು ಬೆಂಗಳೂರಿನ ಕೋಣನಕುಂಟೆಯಲ್ಲಿ ಇದ್ದದ್ದು ಗೊತ್ತಾದ ಮೇಲೆ 24 ಗಂಟೆಗಳ ನಂತರ ಅಟ್ಯಾಕ್ ಮಾಡಿದ್ದಾರೆ.

ಶ್ರೀ ಧರ್ಮಸಿಂಗ್ : ಮೊನ್ನೆ ನಡೆದ ವಿಷಯದಲ್ಲಿ ಪೋಲೀಸರು ಯಾವ ರೀತಿ ನಿರ್ಣಯ ತೆಗೆದುಕೊಂಡಿದ್ದಾರೆ, ಮತ್ತೊಂದು ಮಗದೊಂದು ವಿಷಯ ಪ್ರತ್ಯೇಕ. ನಾನು ಅದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಪೋಲೀಸ್ ವೈರ್‌ಲೆಸ್ ಮುಂತಾದ ಆಧುನೀಕರಣಕ್ಕಾಗಿ 1991-92ನೇ ಸಾಲಿನಲ್ಲಿ 69-00 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಅಂದಾಜಿರುತ್ತದೆ. We have provided Rs.69 lakhs. Already we have spent for that also. I have given a detailed report.

ಅಧ್ಯಕ್ಷರು ; ಕರ್ನಾಟಕದ ಪೋಲೀಸರು ಬಹಳ ಸುತ್ಯಾರ್ಹವಾದ ಕೆಲಸ ಮಾಡಿದ್ದಾರೆ ಎನ್ನುವ ಬಗ್ಗೆ ಕಾಂಪ್ಲಿಮೆಂಟ್ಸ್ ಬರುತ್ತಿವೆ.

ಶ್ರೀ ವಿಜಯಕುಮಾರ ಶೆಟ್ಟಿ : ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಮ್ಮ ಜಿಲ್ಲೆಗೆ 1969ರಲ್ಲಿ ಯಾವ ಪೋಲೀಸ್ ಸಿಬ್ಬಂಧಿ ಒದಗಿಸಲಾಗಿತ್ತೋ ಅದೇ ಸಿಬ್ಬಂಧಿ ಇವತ್ತಿಗೂ ಮುಂದುವರಿಯುತ್ತಿದೆ. ನಮ್ಮ ಪೆಣಂಬೂರು ಹಾರ್ಬರ್ ಸ್ಟೇಷನ್‌ನಲ್ಲಿ ಕೇವಲ 11 ಜನ ಪೋಲೀಸ್ ಸಿಬ್ಬಂದಿ ಇದ್ದು ಅದರಲ್ಲಿ ಇಬ್ಬರು ರಜಾ ಹೋಗಿರುತ್ತಾರೆ. ಹಾಗೂ 4 ಜನ ಮಿನಿಸ್ಟರ್ ಬಂದರೆ ಅವರ ಜೊತೆ ಹೋಗಿರುತ್ತಾರೆ. ಬಾಕಿ ಉಳಿದವರು 5 ಮಂದಿ ಮಾತ್ರ. ಆದ್ದರಿಂದ ಇದನ್ನು ಹೆಚ್ಚು ಮಾಡಬೇಕು.

ಅಧ್ಯಕ್ಷರು ; ಈಗ ಮುಂದಿನ ಪ್ರಶ್ನೆ.

ಶ್ರೀ ಕೆ.ಜೆ. ಜಾರ್ಜ್ : ಈ ಪ್ರಶ್ನೆ ಮಾನ್ಯ ಕೃಷಿ ಸಚಿವರಿಗೆ ಸಂಬಂಧಪಟ್ಟಿದ್ದು. ದಯವಿಟ್ಟು ಇದರ ಬಗ್ಗೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ ; ಬಹಳ ಮೋಜಿನ ಮತ್ತು ಮಹತ್ವದ ಪ್ರಶ್ನೆ ಇದು.

ಅಧ್ಯಕ್ಷರು : ಹಾಗಿದ್ದರೆ ನೀವು ಇವರಿಗೆ ಏಕೆ ಈ ಪ್ರಶ್ನೆಯನ್ನು ಹಾಕಿದಿರಿ? ಆಗ್ರಿಕಲ್ಚರ್‌ಗೂ, ಜಾರ್ಜ್‌ಗೂ ಏನು ಸಂಬಂಧ?

ಶ್ರೀ ವಾಟಾಳ್ ನಾಗರಾಜ್ ; ಇದು ನಗರಾಭಿವೃದ್ಧಿ ಇಲಾಖೆಗೆ ಬರುತ್ತದೆ.

ಅಧ್ಯಕ್ಷರು : ಇದು ಕೃಷಿ ಭವನದ ವಿಚಾರ. ನೀವು ಇದನ್ನು ವ್ಯವಸಾಯದ ಸಚಿವರಿಗೆ ಡೈರೆಕ್ಟ್ ಮಾಡಬೇಕಾಗಿತ್ತು. ಕೃಷಿ ಭವನ ಅವರಿಗೆ ಸೇರಿದ್ದು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ ; ಇದು ಸರ್ಕಾರ ಅವ್ಯವಹಾರ ಕುರಿತು ಕೇಳುವ ಪ್ರಶ್ನೆ.

ಅಧ್ಯಕ್ಷರು : ಸರ್ಕಾರಿ ಅವ್ಯವಹಾರವನ್ನು ನೋ-ಕಾನ್ಫಿಡೆನ್ಷಿಯಲ್ ಮೋಷನ್‌ನಲ್ಲಿ ಹೇಳಬಹುದು.

ಪ್ರೋ. ಎಂ. ಡಿ. ನಂಜುಡಸ್ವಾಮಿ ; ಇದು ಸುಮ್ಮನೆ ಹೆಸರಿಗೆ ಕೃಷಿ ಭವನ ಎಂದು ಇದೆ. ಆ ಭವನ ಈಗ ಕೃಷಿ ಸಚಿವರ ಆಧೀನದಲ್ಲಿ ಇಲ್ಲ. ಇದು ನಗರಾಭಿವೃದ್ಧಿ ಸಚಿವರ ಹತೋಟಿಗೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ ; ನಗರಾಭಿವೃದ್ಧಿ ಸಚಿವರ ಹತೋಟಿಗೆ ಬಂದಿದ್ದು ಮತ್ತೆ ಅದು ಅಬಕಾರಿ ಸಚಿವರ ಕಡೆ ಹೋಗುತ್ತದೆ. ಏಕೆಂದರೆ ಅಲ್ಲಿ ವ್ಯವಹಾರ ನಡೆಯುತ್ತಿರುವುದು ಅಬಕಾರಿ ಸಚಿವರದ್ದು. ಕಟ್ಟಡ ಕೃಷಿ ಸಚಿವರದ್ದು. ಇದರ ಆಡಳಿತ ನಗರಾಭಿವೃದ್ಧಿ ಸಚಿವರದ್ದು. ಇದರಲ್ಲಿ ಮೂರು ಸಚಿವರು ಸೇರಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯಲ್ಲಿ ಕೃಷಿ ಭವನ ಕಟ್ಟುವ ಹೆಸರು ಹೇಳಿ, ಅಲ್ಲಿ ಈಗ ಬಾರ್ ನಡೆಸುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಅಲ್ಲಿ ಕಟ್ಟಡ ಆಗಿದ್ದು ಅದರಲ್ಲಿ ಬಾರ್ ನಡೆಯುತ್ತಿದೆ. ಕರಾರು ಪ್ರಕಾರ ಕೃಷಿ ಭವನ ಎಂದರೆ ರೈತರ ಸಹಾಯಕ್ಕಾಗಿ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಹಾಗು ರೈತರಿಗೆ ಮಾಹಿತಿ ಒದಗಿಸುವ ವಾಚನಾಲಯ ಕಟ್ಟುತ್ತೇವೆಂದು ಸ್ಥಳ ದೊರಕಿಸಿಕೊಂಡು ಈಗ ಬಾರ್ ನಡೆಸುತ್ತಿದ್ದಾರೆ. ಒಂದು ಪಕ್ಷ ಕರಾರು ವಯಲೇಟ್ ಆಗಿದ್ದರೆ ಸರ್ಕಾರ ಕೂಡಲೇ ಅದನ್ನು ತನ್ನ ಕಬ್ಜಕ್ಕೆ ತೆಗೆದುಕೊಳ್ಳಬಹುದೆಂದಿದೆ. ಆದಕಾರಣ ಈ ಪ್ರಶ್ನೆ ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಸಚಿವರಿಗೆ ಸಂಬಂಧಿಸಿದ್ದು.

ಶ್ರೀ ಕೆ.ಜೆ. ಜಾರ್ಜ್ : ಆ ಬಗ್ಗೆ ದಾಖಲೆಗಳನ್ನು ನೋಡಿ ತರಿಸಿ ಈ ಬಗ್ಗೆ ನಾನು ಸರಿಯಾದ ಉತ್ತರವನ್ನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು : ನಿಮಗೆ ಸಂಬಂಧಪಟ್ಟ ಪ್ರಶ್ನೆಗಳು ಮುಂದೆ ಈ ಸದನದಲ್ಲಿ ಬರುವ ದಿನದಂದು ಇದನ್ನು ತೆಗೆದುಕೊಳ್ಳಬಹುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅಲ್ಲಿ ಬಾರ್ 7-8 ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಇದನ್ನು ಇನ್ನು 7-8 ದಿವಸಗಳಲ್ಲಿ ಸರಿಪಡಿಸುತ್ತೀರಾ?

ಅಧ್ಯಕ್ಷರು 7-8 ವರ್ಷಗಳಿಂದ ನಡೆಯುತ್ತಿರುವುದನ್ನು 7-8 ದಿವಸಗಳಲ್ಲಿ ಸರಿಪಡಿಸುವುದಕ್ಕಾಗುತ್ತದೆಯೇ? ಕನಿಷ್ಟ ಪಕ್ಷ 7-8 ವರ್ಷಗಳಾದರೂ ಬೇಕಾಗುತ್ತದೆ.

ಶ್ರೀ ಎಸ್. ಹೆಚ್ ಕೌಜಲಗಿ ; ಕೃಷಿತ ಭವನವನ್ನು ಯಾವ ಉದ್ದೇಶಕ್ಕಾಗಿ ಕೂಡಲಾಯಿತು? ಯಾವ ಷರತ್ತಿಗೆ ಒಳಪಟ್ಟ ಕೂಡಲಾಯಿತು? ಈಗ ಅಲ್ಲಿ ನಡೆಯುತ್ತಿರುವುದು ಏನು? ಇದು ಬಹಳ ಮುಖ್ಯ?

ಅಧ್ಯಕ್ಷರು : ಕೌಜಲಗಿರಿಯವರೇ, ಈ ಪ್ರಶ್ನೆ ಮುಂದಿನ ವಾರ ಬರುತ್ತದೆ.

ಈಗ ಪ್ರಶ್ನೋತ್ತರ ಮುಗಿಯುತು.

ಶ್ರೀಮತಿ ಮೋಟಮ್ಮ : ನನ್ನದು ಮತ್ತು ಸುಮಾ ವಸಂತ ಅವರದ್ದು ಪ್ರಶ್ನೆ ಇದೆ.

ಚುಕ್ಕೆಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 3-9-91ರ ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ ಪ್ರಶ್ನೆಗಳ ಪೈಕಿ 43ನೇ ಚುಕ್ಕೆ ಗುರುತಿಲ್ಲದ ಪ್ರಶ್ನೆಯನ್ನು ಬಿಟ್ಟು ಇತರ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಕಬ್ಬಿನ ಮೇಲಿನ ತೆರಿಗೆಯ ಆದಾಯ

2287 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಒಂದು ಎಕರೆಯಲ್ಲಿ ಸರಾಸರಿ ಮೂವತ್ತು ಟನ್ ಕಬ್ಬು ಬೆಳೆಯುವುದರಿಂದ ರಾಜ್ಯ ಸರ್ಕಾರಕ್ಕೆ ಬರುವ ತೆರಿಗೆಯ ಆದಾಯ ಎಷ್ಟು.

ಆ) ಒಂದು ಎಕರೆ ಕಬ್ಬು ಬೆಳೆಯುವುದರಿಂದ ಕೇಂದ್ರ ಸರ್ಕಾರಕ್ಕೆ ಸರಾಸರಿ 30 ಟನ್‌ಗಳಿಗೆ ಬರುವ ತೆರಿಗೆಯ ಮೊತ್ತವೆಷ್ಟು?

ಇ) ಈ ಆದಾಯದಲ್ಲಿ ಶೇಕಡಾ 1 ರೈತರ ಹೊಲಗಳಿಗೆ ಹಾದು ಹೋಗುವ ರಸ್ತೆಗಳ ಅಭಿವೃದ್ಧಿಗಾಗಿ ಖರ್ಚು ಮಾಡಲು ಸರ್ಕಾರಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಒಂದು ಎಕರೆಗೆ 30ಟನ್ ಕಬ್ಬಿನಂತೆ ಪ್ರತಿ ಎಕರೆಯಿಂದ ಸರ್ಕಾರಕ್ಕೆ ಬರುವ ಖರೀದಿ ತೆರಿಗೆಯು ರೂ.475.20 (ಸಕ್ಕರೆ ಕಾರ್ಖಾನೆಗಳು ಉಳಿಸಿಕೊಳ್ಳುವ ಸಬ್ಸಿಡಿ ಹಣ ಹೊರತುಪಡಿಸಿ)

ಆ) ಎಕ್ಸೈಸ್ ಶುಲ್ಕ ರೂ.4110-00 ವಿವರಗಳು ಈ ಕೆಳಕಂಡಂತಿವೆ:

1 ಲೆವಿ ಸಕ್ಕರೆ ಪ್ರತಿ ಟನ್‌ಗೆ

ರೂ. 52.00 ರಂತೆ ರೂ.1560.00

2. ಮುಕ್ತ ಸಕ್ಕರೆ ಪ್ರತಿಟನ್‌ಗೆ ರೂ.85.00 ರಂತೆ ರೂ.2550.00

ಇ) ಇದನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುವುದು.